## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 831 |
| ಸದಸ್ಯರ ಹೆಸರು | : | ಶ್ರೀ.ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20/09/2022 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | 2021-22 ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಟ ನಿವಾರಣೆ ಯೋಜನೆಗೆ ಹಂಚಿಕೆಯಾದ ರೂ.30.00 ಲಕ್ಷದಲ್ಲಿ ಕೇವಲ ರೂ. 2.50 ಲಕ್ಷ ಮಾತ್ರವೇ ಡಿಸೆಂಬರ್-2021 ಅಂತ್ಯದವರೆಗೂ ವೆಚ್ಚವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಈ ಮೊತ್ತವನ್ನು ಯಾವ ಕಾರಣಕ್ಕೆ ವೆಚ್ಚ ಮಾಡಲಾಗಿದೆ. | 2021-22 ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಟ ನಿವಾರಣೆ ಯೋಜನೆಗೆ ಹಂಚಿಕೆಯಾದ ರೂ.30.00 ಲಕ್ಷದಲ್ಲಿ ಕೇವಲ ರೂ. 2.50 ಲಕ್ಷ ಮಾತ್ರವೇ ಡಿಸೆಂಬರ್-2021 ಅಂತ್ಯದವರೆಗೂ ವೆಚ್ಚವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಈ ರೂ. 2.50 ಲಕ್ಷದಲ್ಲಿ, ರೂ. 2.00 ಲಕ್ಷಗಳನ್ನು ಹುಬ್ಬಳ್ಳಿ-ಧಾರವಾಡದಲ್ಲಿ ನಡೆದ ಗ್ರಾಮೀಣ ಕುಶಲಕರ್ಮಿ ಉತ್ಪನ್ನಗಳ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಹಾಗೂ ರೂ.50,000/- ಗಳನ್ನು ಬೆಂಗಳೂರು(ನಗರ) ಜಿಲ್ಲೆಯಲ್ಲಿ ಮಾನವ ಕಳ್ಳ ಸಾಗಾಣಿಕೆ ತಡೆಯುವ ನಿಟ್ಟಿನಲ್ಲಿ ತಯಾರಿಸಿರುವ ಕ್ರಮಬದ್ಧ ಕಾರ್ಯವಿಧಾನ ಮಾರ್ಗಸೂಚಿ ಕುರಿತಂತೆ ಒಂದು ದಿನದ ಕಾರ್ಯಾಗಾರಕ್ಕಾಗಿ ಬಳಸಲಾಗಿದೆ.<br><br>ಮಾನವ ಕಳ್ಳ ಸಾಗಾಣಿಕೆ ನಿವಾರಣೆ ಯೋಜನೆಯಡಿ ಬಿಡುಗಡೆಯಾದ ಅನುದಾನ ರೂ.30.00 ಲಕ್ಷಗಳನ್ನು ಮಾರ್ಚ್-2022 ರ ಅಂತ್ಯಕ್ಕೆ ಸಂಪೂರ್ಣ ವೆಚ್ಚ ಭರಿಸಲಾಗಿದೆ. |
| ಆ. | 2021-22 ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಟ ನಿವಾರಣೆ ಯೋಜನೆಯ ಅವಶ್ಯಕತೆ ಇರಲಿಲ್ಲ ಎಂಬುದು ಸರ್ಕಾರದ ಅನಿಸಿಕೆಯೇ: ಈ ಕುರಿತು ಸರ್ಕಾರದ ನಿಲುವೇನು: | 2021-22 ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಟ ನಿವಾರಣೆ ಯೋಜನೆಯ ಅವಶ್ಯಕತೆ ಇದ್ದು, ಈ ಹಿನ್ನೆಲೆಯಲ್ಲಿ ಇಲಾಖೆಯು ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಟ ತಡೆಯುವ ನಿಟ್ಟಿನಲ್ಲಿ ದೇಶದಲ್ಲಿಯೇ ಪ್ರಥಮವಾಗಿ ಕ್ರಮ ಬದ್ಧ ಕಾರ್ಯವಿಧಾನ ಮಾರ್ಗಸೂಚಿಯನ್ನು (SOP) ಸಿದ್ಧಪಡಿಸಿ, 39,000 ಪ್ರತಿಗಳನ್ನು ಮುದ್ರಿಸಿ ಜಿಲ್ಲೆಗಳಿಗೆ ವಿತರಿಸಲಾಗಿದೆ. ಅನೈತಿಕ ಸಾಗಾಣಿಕೆ ತಡೆ ಕಾಯ್ದೆ 1956 ಹಾಗೂ ಕ್ರಮಬದ್ಧ ಕಾರ್ಯವಿಧಾನ ಮಾರ್ಗಸೂಚಿ ಕುರಿತಂತೆ ಜಿಲ್ಲಾ ಮಟ್ಟದ ಎಲ್ಲಾ ಭಾಗೀದಾರ ಇಲಾಖೆಗಳಾದ ಪೋಲಿಸ್, ಸಮಾಜ ಕಲ್ಯಾಣ, ಶಿಕ್ಷಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಂದಾಯ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ , ಸ್ವಯಂ ಸೇವಾ ಸಂಸ್ಥೆಗಳಿಗೆ 2021-22 ನೇ ಸಾಲಿನ ಕ್ರಿಯಾ ಯೋಜನೆಯಂತೆ ತರಬೇತಿಯನ್ನು ಆಯೋಜಿಸಲಾಗಿದೆ.<br><br>ಅದರಂತೆ ಪ್ರತಿ ಜಿಲ್ಲೆಗೆ ರೂ.50,000/- ಗಳಂತೆ ದಿನಾಂಕ:01.09.2021 ರಂದು 26 ಜಿಲ್ಲೆಗಳಿಗೆ ಹಾಗೂ ದಿನಾಂಕ:13.01.2022 ರಂದು ಉಳಿದ 4 ಜಿಲ್ಲೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ. ಕಾರ್ಯಾಗಾರವನ್ನು ಹಮ್ಮಿಕೊಂಡಿರುವ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ. |

| | | |
|---|---|---|
| ಇ. | ಕೇಂದ್ರ ಪುರಸ್ಕೃತ ಉಜ್ವಲ ಯೋಜನೆಯ ಅನ್ವಯ 2021-22 ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಟ ತಡೆಗಟ್ಟಲು ಮಂಜೂರಾದ ರೂ.200.00 ಲಕ್ಷದಲ್ಲಿ ಡಿಸೆಂಬರ್-2021 ರ ವರೆಗೂ ಯಾವುದೇ ಮೊತ್ತ ವೆಚ್ಚವಾಗದಿರುವ ಕುರಿತು ಸರ್ಕಾರದ ನಿಲುವೇನು: ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಟ ತಡೆಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕೇಂದ್ರ ಪುರಸ್ಕೃತ ಉಜ್ವಲ ಯೋಜನೆಯ ಅನ್ವಯ 2021-22 ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.<br><br>ಆದರೆ 2019-20 ನೇ ಸಾಲಿನ ಅನುದಾನ ರೂ.126.56 ಲಕ್ಷಗಳು ಹಾಗೂ 2020-21 ನೇ ಸಾಲಿನ ಅನುದಾನ ರೂ.123.84 ಲಕ್ಷಗಳು ಒಟ್ಟು ರೂ.250.40 ಲಕ್ಷಗಳನ್ನು ಕೇಂದ್ರ ಸರ್ಕಾರವು 2020-21ನೇ ಆರ್ಥಿಕ ವರ್ಷದ ಕೊನೆಯಲ್ಲಿ ಅಂದರೆ ದಿನಾಂಕ:30.03.2021 ಹಾಗೂ ದಿನಾಂಕ:31.03.2021 ರಂದು ಬಿಡುಗಡೆ ಮಾಡಿದ್ದು, ಆ ವರ್ಷದಲ್ಲಿ ಅದನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಸದರಿ ಅನುದಾನವನ್ನು ಕೇಂದ್ರ ಸರ್ಕಾರವು 2022-23ನೇ ಸಾಲಿನಲ್ಲಿ ಮರುಮೌಲಿಕರಣಗೊಳಿಸಿ ಬಿಡುಗಡೆ ಮಾಡಿದ್ದು, ಉಜ್ವಲ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ 13 ಸ್ವಯಂ ಸೇವಾ ಸಂಸ್ಥೆಗಳಿಗೆ ಬಿಡುಗಡೆ ಮಾಡುವ ಮೂಲಕ ಸಂಪೂರ್ಣ ಅನುದಾನ ಭರಿಸಲಾಗಿದೆ.<br><br>ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳ ವಿವರ ಅನುಬಂಧ - 2 ರಲ್ಲಿ ಲಗತ್ತಿಸಿದೆ. |

ಸಂಖ್ಯೆ: ಮಮಇ 168 ಮಮಅ 2022

Halappa SA

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

## ಅನುಬಂಧ-1

**ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆ ಯೋಜನೆ (ಲೆಕ್ಕ ಶೀರ್ಷಿಕೆ : 2235-02-102-0-24-100)**

| ಕ್ರ.ಸಂ | ಜಿಲ್ಲೆ ಹೆಸರು | ಬಿಡುಗಡೆಯಾದ ಅನುದಾನ | ಯಾವ ತಿಂಗಳಲ್ಲಿ ಖರ್ಚಾಗಿದೆ. |
|---|---|---|---|
| 1 | ಬಾಗಲಕೋಟೆ | 50.000.00 | 30.7.2022 |
| 2 | ಬೆಂಗಳೂರು ನಗರ | 50.000.00 | 30.07.2022 |
| 3 | ಬೆಂಗಳೂರು (ಗ್ರಾ) | 50.000.00 | 21.12.2021 |
| 4 | ಬೆಳಗಾಂ | 50.000.00 | 26.10.2021 |
| 5 | ಬಳ್ಳಾರಿ | 50.000.00 | ವಿಜಯನಗರ ದಿನಾಂಕ:15.2.2022, ದಿನಾಂಕ:ಬಳ್ಳಾರಿ 3.2.2022 |
| 6 | ಬೀದರ್ | 50.000.00 | 30.7.2022 |
| 7 | ಬಿಜಾಪುರ | 50.000.00 | 27.10.2021, 28.10.2021 |
| 8 | ಚಾಮರಾಜನಗರ | 50.000.00 | 30.3.2022 |
| 9 | ಚಿಕ್ಕಬಳ್ಳಾಪುರ | 50.000.00 | 24.01.2022 |
| 10 | ಚಿಕ್ಕಮಗಳೂರು | 50.000.00 | 10.01.2022 |
| 11 | ಚಿತ್ರದುರ್ಗ | 50.000.00 | 08.10.2022 |
| 12 | ದಕ್ಷಿಣ ಕನ್ನಡ | 50.000.00 | 10.01.2022 |
| 13 | ದಾವಣಗೆರೆ | 50.000.00 | 24.12.2021 |
| 14 | ಧಾರವಾಡ | 50.000.00 | 06.04.2022 |
| 15 | ಗದಗ | 50.000.00 | ಮಾರ್ಚ್ 2022 |
| 16 | ಗುಲ್ಬರ್ಗಾ | 50.000.00 | 02.02.2022 |
| 17 | ಯಾದಗಿರಿ | 50.000.00 | 08.112021, 9.11.2021 |
| 18 | ಹಾಸನ | 50.000.00 | 08.02.2022 |
| 19 | ಹಾವೇರಿ | 50.000.00 | 10.02.2022 |
| 20 | ಕೊಡಗು | 50.000.00 | 7.10.2021, 9.11.2021 |
| 21 | ಕೋಲಾರ | 50.000.00 | 30.10.2021 |
| 22 | ಕೊಪ್ಪಳ | 50.000.00 | 31.03.2022, 06.01.2022 |
| 23 | ಮಂಡ್ಯ | 50.000.00 | 24.02.2022 |
| 24 | ಮೈಸೂರು | 50.000.00 | 31.07.2022 |
| 25 | ರಾಮನಗರ | 50.000.00 | 30.8.2022 |
| 26 | ರಾಯಚೂರು | 50.000.00 | 28.01.2022 |
| 27 | ಶಿವಮೊಗ್ಗ | 50.000.00 | 16.11.2021 |
| 28 | ತುಮಕೂರು | 50.000.00 | 10.2.2022 |
| 29 | ಉಡುಪಿ | 50.000.00 | 7.2.2022, 31.01.2022 |
| 30 | ಉತ್ತರ ಕನ್ನಡ | 50.000.00 | 16.12.2021 |
| | | | |

# ಅನುಬಂಧ – 2

1. ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆಗಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಗಳನ್ನು ರಚಿಸಲಾಗಿದೆ. ಸದರಿ ಸಮಿತಿ ಸದಸ್ಯರಿಗೆ SIRD ಮೂಲಕ ಯೂ-ಟ್ಯೂಬ್ ತರಬೇತಿ ನೀಡಲಾಗಿದೆ.
2. ಸಾಗಾಣಿಕೆಗೆ ತುತ್ತಾಗಬಹುದಾದ ಹಾಗೂ ಸಾಗಾಣಿಕೆಗೆ ಒಳಪಟ್ಟ ಮಹಿಳೆಯರು ಹಾಗೂ ಮಕ್ಕಳ ರಕ್ಷಣೆ, ಪುನರ್ವಸತಿಗಾಗಿ ಕೇಂದ್ರ ಪುರಸ್ಕೃತ ಉಜ್ವಲ ಯೋಜನೆಯನ್ನು 11 ಜಿಲ್ಲೆಗಳಲ್ಲಿ 15 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.
3. ಕೈಪಿಡಿ, ಬಿತ್ತಿ ಪತ್ರ, ಸಾಕ್ಷಚಿತ್ರ, SOP ಇತ್ಯಾದಿಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.
4. 2021-22 ನೇ ಸಾಲಿನಲ್ಲಿ ಸಾರ್ವಜನಿಕರಿಗೆ ಮಾನವ ಕಳ್ಳ ಸಾಗಾಣಿಕೆ ತಡೆ ಕುರಿತು ಅರಿವು ಮೂಡಿಸಲು ಚಂದನ ದೂರದರ್ಶನ ವಾಹಿನಿಯಲ್ಲಿ 06 ಸಂವಾದ ಕಾರ್ಯಕ್ರಮಗಳನ್ನು, 06 Time Check Before News (30 ದಿನಗಳ ಅವಧಿಗೆ) ಪ್ರಸಾರ ಮಾಡಲಾಗಿದೆ. ಆಕಾಶವಾಣಿಯಲ್ಲಿ 30 ಸೆಕೆಂಡುಗಳ 05 ರೇಡಿಯೋ ಸ್ಪಾಟ್ ಗಳನ್ನು 31 ದಿನಗಳ ಕಾಲ ಪ್ರಸಾರ ಮಾಡಲಾಗಿದೆ.
5. ದಿನಾಂಕ:13.07.2022 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮಾನವ ಕಳ್ಳ ಸಾಗಾಣಿಕೆ ತಡೆ ಕುರಿತು ಉನ್ನತ ಮಟ್ಟದ ಸಭೆಯನ್ನು ಏರ್ಪಡಿಸಲಾಗಿದೆ.
6. ದಿನಾಂಕ:23.06.2022 ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಪ್ರತಿ ವರ್ಷ **ಜುಲೈ 30** ನೇ ತಾರಿಖನ್ನು ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ ಎಂದು ಆಚರಿಸುವಂತೆ ತಿಳಿಸಲಾಗಿದೆ. ಅದರಂತೆ ದಿನಾಂಕ:30.07.2022 ರಂದು ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಹಂತದಲ್ಲಿ ಭಾಗೀದಾರ ಇಲಾಖೆಗಳೊಂದಿಗೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.